

ಕುರಿತು ತುಂಬ ಅಧ್ಯಯನ ಮಾಡಿದ್ದೇನೆ. ಇಂಗ್ಲೆಂಡ್‌ನಲ್ಲಿರುವಾಗ ಏರ್ ಆ್ಯಂಬುಲೆನ್ಸ್ ಹೇಗೆ ಕೆಲಸ ಮಾಡುತ್ತದೆ? ಹೆಲಿಕಾಪ್ಟರ್‌ನಲ್ಲಿರುವ ಆ್ಯಂಬುಲೆನ್ಸ್‌ನಲ್ಲಿ ಹೃದಯ, ಶ್ವಾಸಕೋಶ ಮುಂತಾದ ಅಂಗಾಂಗಗಳನ್ನು ಹೇಗೆ ತರುವುದು? ಇದನ್ನು ತುರ್ತಾಗಿ ಚಿಕಿತ್ಸೆಗೆ ಒಳಪಡಿಸುವುದು ಹೇಗೆ? ಮುಂತಾದ ವಿಷಯಗಳ ಬಗ್ಗೆ ಪ್ರಯೋಗಾತ್ಮಕವಾಗಿಯೂ ತಿಳಿದುಕೊಂಡೆ. ಇವೆಲ್ಲವೂ ಇಲ್ಲಿ ಸೇವೆ ಆರಂಭಿಸುವಾಗ ಸಹಾಯಕ್ಕೆ ಬಂತು. ಅತ್ಯಂತ ಕಡಿಮೆ ವೆಚ್ಚದಲ್ಲಿ ಹೆಲಿಕಾಪ್ಟರ್ ಸೇವೆ ಒದಗಿಸುವ ಈ ತಂಡ, ಮಹಿಳೆಯರಿಗೆಲ್ಲ ಸ್ಫೂರ್ತಿದಾಯಕವೂ ಹೌದು.

***

2018ರಲ್ಲಿ ಕೇರಳದಲ್ಲಿ ಹಿಂದೆಂದೂ ಕಂಡು–ಕೇಳರಿಯದಷ್ಟು ದೊಡ್ಡ ಜಲಪ್ರಳಯ ಉಂಟಾಗಿತ್ತು. ಆಗ ನೂರಾರು ಜನರು ನೀರುಪಾಲಾದರು. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಹೆಲಿಕಾಪ್ಟರ್ ಆ್ಯಂಬುಲೆನ್ಸ್ ಮೂಲಕ ಗಾಯಾಳುಗಳನ್ನು ತಂದು ಆಸ್ಪತ್ರೆಗೆ ಸೇರಿಸಿದೆವು. ಇದು ಭಾರತದಲ್ಲಿ ಮೊದಲ ‘ಹೆಲಿಕಾಪ್ಟರ್ ಎಮರ್ಜೆನ್ಸಿ ಸೇವೆ’ ಎಂಬ ಭಾಷ್ಯ ಬರೆಯಿತು.

***

ತುಮಕೂರಿನ ಸಿದ್ಧಗಂಗಾ ಸ್ವಾಮೀಜಿ ಅವರಿಗೆ ತೀವ್ರ ಅನಾರೋಗ್ಯವಾಗಿದ್ದ ಸಂದರ್ಭದಲ್ಲಿ ಅವರನ್ನು ಸಿದ್ಧಗಂಗಾ ಮಠದಿಂದ ಚೆನ್ನೈಯ ರೇಲಾ ಆಸ್ಪತ್ರೆಗೆ ಅತ್ಯಂತ ಕ್ಷಿಪ್ರವಾಗಿ ಐಕ್ಯಾಟ್ ಏರ್ ಆ್ಯಂಬುಲೆನ್ಸ್‌ನಿಂದ ಕರೆದುಕೊಂಡು ಹೋದೆವು.

***

ಒಬ್ಬ ಪ್ರಮುಖ ರಾಜಕೀಯ ಮುಖಂಡ ಕಲಬುರಗಿಯಲ್ಲಿ ಚುನಾವಣಾ ಪ್ರಚಾರ ಮಾಡುತ್ತಿದ್ದ ವೇಳೆ ಗಲಾಟೆ ಆಗಿ ಪರಿಸ್ಥಿತಿ ಕೈಮೀರಿತು. ಅವರಿಗೆ ಏಟು ಆಗಿ ತಕ್ಷಣವೇ ಶಸ್ತ್ರಚಿಕಿತ್ಸೆ ಮಾಡಬೇಕಾಯಿತು. ಶಸ್ತ್ರಚಿಕಿತ್ಸೆಗೆ ಒಳಗಾದ ಮರುದಿನವೇ ಹೃದಯಾಘಾತವೂ ಆಯಿತು. ಆಗ ನಮಗೆ ಎಮರ್ಜೆನ್ಸಿ ಕಾಲ್ ಬಂತು. ಆಗ ಕಲಬುರಗಿಗೆ ವಿಮಾನ ಸೇವೆಯೂ ಇರಲಿಲ್ಲ. ನಾವು ಏರ್ ಆ್ಯಂಬುಲೆನ್ಸ್ ತಗೊಂಡು ಹೋಗಿ ಅವರನ್ನು ಬೆಂಗಳೂರಿಗೆ ಕರೆದುಕೊಂಡು ಬಂದ್ವಿ. ಸೂಕ್ತ ಸಮಯದಲ್ಲಿ ಚಿಕಿತ್ಸೆ ದೊರೆತ ಪರಿಣಾಮ ಅವರು ಪ್ರಾಣಾಪಾಯದಿಂದ ಪಾರಾಗುವಂತಾಯಿತು.

***

ಇದು 2023ರ ಘಟನೆ. ಛತ್ತೀಸಘಢ ಚುನಾವಣಾ ನಿರ್ವಹಣೆಗಾಗಿ ಬಂದ ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆ ಸಿಬ್ಬಂದಿಯನ್ನು ನಕ್ಸಲೀಯರು ಹೊಡೆಯುತ್ತಿದ್ದರು. ಅಲ್ಲದೆ ಇವರನ್ನು ಕಾಡಿಗೆ ಕರೆದುಕೊಂಡು ಹೋಗಿ ಪ್ರಾಣ ತೆಗೆಯುವ ಪ್ರಯತ್ನ ಮಾಡುತ್ತಿದ್ದರು. ಆಗ ಛತ್ತೀಸಘಡದ ಚುನಾವಣಾಧಿಕಾರಿ ಇಲ್ಲಿನ ಬಸ್ತರ್ ಏರ್‌ಪೋರ್ಟ್‌ಗೆ ನಮ್ಮ ಏರ್ ಆ್ಯಂಬುಲೆನ್ಸ್ ಸಹಾಯ ಕೇಳುತ್ತಾರೆ. ನಮ್ಮ ಕಾರ್ಯಪಡೆ ಅಲ್ಲಿಗೆ ತಕ್ಷಣ ತೆರಳಿ ಕಾಡಿನೊಳಗೇ ಹೆಲಿಕಾಪ್ಟರ್ ತೆಗೆದುಕೊಂಡು ಹೋಗಿ ಗಾಯಾಳುಗಳನ್ನು ಕರೆದುತಂದು ಚಿಕಿತ್ಸೆ ಕೊಡಿಸಿದೆವು. ಇದು ಪ್ರಾಣವನ್ನೇ ಪಣಕ್ಕಿಟ್ಟು ಮಾಡಿದ ಸೇವೆಯಾಗಿತ್ತು.

ಭಾರತದ ಪ್ರಮುಖ ಏರ್ ಆಂಬ್ಯುಲೆನ್ಸ್ ಸೇವೆಯಾದ ICATT Air Ambulanceನ ನಿರ್ದೇಶಕಿ. ಮಂಡ್ಯ ಮೂಲದ ಶಾಲಿನಿ, ಮೈಸೂರಿನ ಜೆಎಸ್‌ಎಸ್ ಕಾಲೇಜಿನಲ್ಲಿ ಎಂಬಿಬಿಎಸ್ ಮುಗಿಸಿದವರು, ಇಂಗ್ಲೆಂಡ್ ಅನಸ್ತೇಷಿಯಾ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದು ಅಲ್ಲಿಯೇ ವೈದ್ಯೆಯಾಗಿ ಸೇವೆ ಸಲ್ಲಿಸಿದವರು. ವೃತ್ತಿಯಲ್ಲಿ ಉತ್ತುಂಗಕ್ಕೇರಿದ್ದರೂ ಅದನ್ನು ಬಿಟ್ಟು ತಾಯ್ನಾಡಿಗೆ ಮರಳಿ, ಏರ್ ಆ್ಯಂಬುಲೆನ್ಸ್ ಸಂಸ್ಥೆ ಕಟ್ಟಿದ ಗಟ್ಟಿಗಿತ್ತಿ.

ತುರ್ತು ಸಂದರ್ಭದಲ್ಲಿ ತಮ್ಮ ಸಿಬ್ಬಂದಿ ಜೊತೆಗೆ ರೋಗಿಯನ್ನು ಏರ್ ಆ್ಯಂಬುಲೆನ್ಸ್ ಮೂಲಕ ಸುರಕ್ಷಿತವಾಗಿ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ಪಡೆದುಕೊಳ್ಳುವಲ್ಲಿ ಶ್ರಮಿಸುವವರು. ಭಾರತದ ಎಲ್ಲ ರಾಜ್ಯಗಳಲ್ಲಿ ಮಾತ್ರವಲ್ಲದೆ ಲಿಬಿಯಾ, ಅಫ್ಘಾನಿಸ್ತಾನದಂತಹ ಸಂಘರ್ಷ ಪೀಡಿತ ಸ್ಥಳದಿಂದ ರೋಗಿಗಳನ್ನು ಏರ್‌ಲಿಫ್ಟ್ ಮಾಡಿದ ಸಾಹಸ ಇವರದು. ಏರ್ ಆ್ಯಂಬುಲೆನ್ಸ್‌ನಲ್ಲಿ ವೆಂಟಿಲೇಟರ್, ವೈದ್ಯಕೀಯ ಉಪಕರಣಗಳು ಮತ್ತು ಜೀವ ರಕ್ಷಕ ಉಪಕರಣಗಳಿರುತ್ತವೆ. ರೋಗಿಯ ಸ್ಥಿರತೆ ಕಾಯ್ದುಕೊಳ್ಳಲು ನುರಿತ ವೈದ್ಯರು ಹಾಗೂ ಸಹಾಯಕ ಸಿಬ್ಬಂದಿ ಇರುತ್ತಾರೆ.




***

ಮಧ್ಯಪ್ರದೇಶದಲ್ಲಿ ಅನೇಕ ತುರ್ತು ಸಂದರ್ಭದಲ್ಲಿ ಏರ್ ಆ್ಯಂಬುಲೆನ್ಸ್ ಮೂಲಕ ಚಿಕಿತ್ಸೆ ನೀಡಿದ್ದೇವೆ, ಒಮ್ಮೆ ಇಲ್ಲಿನ ಹಳ್ಳಿಯೊಂದರಲ್ಲಿ ಗರ್ಭಿಣಿಗೆ ವಿಪರೀತ ರಕ್ತಸ್ರಾವವಾಗುತ್ತಿತ್ತು, ನಮಗೆ ಕರೆಬಂದ ಕೂಡಲೇ ಆ ಗರ್ಭಿಣಿಯನ್ನು ಏರ್ ಆ್ಯಂಬುಲೆನ್ಸ್ ಮೂಲಕ ಕರೆದುಕೊಂಡು ಚಿಕಿತ್ಸೆ ಕೊಡಿಸಿದೆವು. ಈ ಮಹಿಳೆ ಪ್ರಾಣಾಪಾಯದಿಂದ ಪಾರಾದದ್ದು ನಮಗೆ ಸಮಾಧಾನ ತಂದಿತು.

***

ಇದು ಮೂರು ವರ್ಷದ ಹಿಂದಿನ ಘಟನೆ. ಚಿಕ್ಕಮಗಳೂರಿನಲ್ಲಿ ಬಸ್ ಹತ್ತುವಾಗ ಕಾಲೇಜು ಹುಡುಗಿ ಬಿದ್ದು ಮೆದುಳು ನಿಷ್ಕ್ರಿಯವಾಗುತ್ತದೆ. ಈಕೆಯ ಅಂಗಾಂಗ ದಾನಕ್ಕೆ ಸಹೃದಯಿ ಪೋಷಕರು ಒಪ್ಪುತ್ತಾರೆ. ಇದೇ ವೇಳೆಗೆ ಬೆಂಗಳೂರಿನ ಆರು ವರ್ಷದ ಹುಡುಗಿಗೆ ಅರ್ಜೆಂಟ್ ಆಗಿ ಹೃದಯ ಕಸಿ ಮಾಡಬೇಕಾಗುತ್ತದೆ. ಚಿಕ್ಕಮಗಳೂರಿನಿಂದ ಹೆಲಿಕಾಪ್ಟರ್ ಆ್ಯಂಬುಲೆನ್ಸ್ ಮೂಲಕ ಹೃದಯವನ್ನು ತಂದು ಈ ಹುಡುಗಿಗೆ ಕಸಿ ಮಾಡಲಾಗುತ್ತದೆ. ಈಗ ಈ ಬಾಲಕಿ ಉತ್ತಮ ಕ್ರೀಡಾಪಟುವಾಗಿ ರೂಪುಗೊಂಡಿದ್ದಾಳೆ.

***

ಚಿಕ್ಕಮಗಳೂರಿನ ವನ್ಯಜೀವಿ ವೈದ್ಯ ಡಾ. ವಿನಯ್ ಕಾಡಾನೆಗೆ ನಿದ್ದೆ ಇಂಜೆಕ್ಷನ್ ನೀಡುವ ವೇಳೆ ಆನೆ ತುಳಿಯುತ್ತದೆ. ಅವರ ಶ್ವಾಸಕೋಶಕ್ಕೆ ಏಟು ಬೀಳುತ್ತದೆ. ತಕ್ಷಣ ಶಿವಮೊಗ್ಗ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಾರೆ. ಅಲ್ಲಿ ಪರಿಣಾಮಕಾರಿ ಚಿಕಿತ್ಸೆ ದೊರೆಯಲ್ಲ. ನಮಗೆ ಕರೆ ಬಂತು. ಆಗ ನಾವು ‘ಎಕ್ಮೊ’ (ಹೃದಯ–ಶ್ವಾಸಕೋಶ ತೀವ್ರ ಹಾನಿಗೊಳಗಾದಾಗ ರಕ್ತಕ್ಕೆ ಆಮ್ಲಜನಕವನ್ನು ಪೂರೈಸಿ, ದೇಹವಿಡೀ ರಕ್ತ ಪರಿಚಲನೆ ಮಾಡುವ ಅತ್ಯಾಧುನಿಕ ಜೀವ ರಕ್ಷಕ ತಂತ್ರಜ್ಞಾನ. ಇದು ರೋಗಿಯ ದೇಹದ ಹೊರಗೆ ರಕ್ತವನ್ನು ಆಮ್ಲಜನಕಯುಕ್ತಗೊಳಿಸಿ, ಅಂಗಾಂಗಗಳು ಚೇತರಿಸಿಕೊಳ್ಳಲು ಸಹಕಾರಿ. ಇದು ಕೊನೆಯ ಹಂತದ ಚಿಕಿತ್ಸೆಯಾಗಿದ್ದು, ಹೆಚ್ಚಾಗಿ ಐಸಿಯುನಲ್ಲಿ ಬಳಸಲಾಗುತ್ತದೆ.) ಬಳಸಿ ಐದು ಜಿಲ್ಲೆಗಳಲ್ಲಿ ಗ್ರೀನ್ ಕಾರಿಡಾರ್ ಮಾಡಿ ಬೆಂಗಳೂರಿಗೆ ಕರೆದು ಚಿಕಿತ್ಸೆಗೆ ವ್ಯವಸ್ಥೆ ಮಾಡಿದೆವು. ಬಳಿಕ ವೈದ್ಯರು ಸಂಪೂರ್ಣ ಚೇತರಿಸಿಕೊಳ್ಳುವಂತಾಗಿದೆ.

ತುರ್ತು ಸಂದರ್ಭದಲ್ಲಿ ಲ್ಯಾಂಡ್ ಆ್ಯಂಬುಲೆನ್ಸ್ ಬಳಸಿ ಅಪಾಯದಿಂದ ಪಾರು ಮಾಡಿದ ಈ ಘಟನೆ ಜೀವನದಲ್ಲಿ ಎಂದೂ ಮರೆಯಲಾಗದ್ದು. ಪ್ರಾಣಕ್ಕಿಂತ ಹೆಚ್ಚಿನದು ಜಗತ್ತಿನಲ್ಲಿ ಬೇರೇನೂ ಇಲ್ಲ. ತುರ್ತು ಸಂದರ್ಭದಲ್ಲಿ ಪ್ರಾಣ ಉಳಿಯಬೇಕಾದರೆ ಕ್ಲುಪ್ತ ಸಮಯದಲ್ಲಿ ಸಿಗುವ ಚಿಕಿತ್ಸೆ ಬಹಳ ನಿರ್ಣಾಯಕ. ಇಂಥ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಚಿಕಿತ್ಸೆಗೆ ಸಹಾಯಹಸ್ತ ಚಾಚುವ ಡಾ. ಶಾಲಿನಿ ಅಂಥವರ ಸಂತತಿ ಸಾವಿರವಾಗಲಿ.